ರೂಪಾಯಿಗಳನ್ನು ಖರ್ಚು ಮಾಡಿ ಕೆರೆ ತುಂಬುವ ಯೋಜನೆ ಮಂಜೂರಾಗಿದ್ದು ಇದು ಕೂಡ ಸಾವಳಗಿ ಭಾಗದ ಕೃಷ್ಣಾ ನದಿಯಿಂದ ನೀರು lift ಆಗುತ್ತಿದೆ. ಬಹಳ ಗ್ರಾಮಗಳು ಕುಡಿಯುವ ನೀರಿನ ಯೋಜನೆ, ಸಾವಳಗಿ ಏತ ನೀರಾವರಿ ಯೋಜನೆಯಿಂದ 4 ಮೆ.ವ್ಯಾ. ಇತ್ಯಾದಿ ಯೋಜನೆಗಳು ಹೊಸ ಹೊಸ ಯೋಜನೆಗಳು ಬರುತ್ತಿವೆ.

ಅಧ್ಯಕ್ಷರು: ಪ್ರಶ್ನೆ ಕೇಳುವುದು ಬಿಟ್ಟು ಭಾಷಣ ಮಾಡುತ್ತಾ ಹೋದರೆ ಹೇಗೆ?

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್: ಜಮಖಂಡಿ ತಾಲ್ಲೂಕಿನಲ್ಲಿ ಬಹಳಷ್ಟು ವಿದ್ಯುತ್ ಬೇಡಿಕೆ ಇರುವಂಥ ಸಾವಳಗಿ ಭಾಗದಲ್ಲಿ 220 ಕೆ.ವಿ. station ಮಂಜೂರು ಮಾಡಿದಾಗ ಮಾತ್ರ ಎಲ್ಲಾ ವಿದ್ಯುತ್ ಬೇಡಿಕೆ ಈಡೇರಿಸಲಿಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಮಂತ್ರಿಯವರು ಇದೇ ವರ್ಷದ ಬಜೆಟ್‌ನಲ್ಲಿ ಮಂಜೂರು ಮಾಡುತ್ತಾರೆಯೇ ಎಂದು ಕೇಳಬಯಸುತ್ತೇನೆ.

ಕು:ಶೋಭಾ ಕರ್ಲಂದಾಜೆ: ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಹೇಳಿದ ಹಾಗೆ, ಅತ್ಯಂತ ಹೆಚ್ಚು ಪ್ರಮಾಣದ ಪಂಪ್‌ಸೆಟ್ಟುಗಳಿರುವುದು ಬಾಗಲಕೋಟ ಜಿಲ್ಲೆಯಲ್ಲಿ. ಬಾಗಲಕೋಟ ಜಿಲ್ಲೆಯ ಕೊರತೆ ನೀಗಿಸುವುದಕ್ಕೆ ನಾವು ನಮ್ಮ ಸ್ಟೇಷನ್‌ಗಳನ್ನು ಉನ್ನತೀಕರಣ ಮಾಡುವುದು ತೀರಾ ಅಗತ್ಯವಿದೆ. ನಾನು ಈಗಾಗಲೇ ಹೇಳಿದೆ. ಮಹಾಲಿಂಗಪುರ ಒಂದು ಸ್ಟೇಷನ್‌ಗೆ ನಾವು ವಿದ್ಯುತ್ ಕೊಟ್ಟರೂ ಅದನ್ನು ತೆಗೆದುಕೊಳ್ಳುವಂಥ ಶಕ್ತಿ ಆ ಘಟಕಕ್ಕೆ ಇಲ್ಲ. ಹಾಗೆ ಇವರು ಜಮಖಂಡಿ ಬಗ್ಗೆ ಕೇಳಿದ್ದಾರೆ. ಇಡೀ ನಮ್ಮ ಬಾಗಲಕೋಟ ಜಿಲ್ಲೆಗೆ ವಿದ್ಯುತ್ ಕೊಡಬೇಕಾದರೆ, ರಿಕಂಡಕ್ಟರ್ ಮತ್ತು ಹೊಸ ಸ್ಟೇಷನ್‌ಗಳನ್ನು ಮಾಡುವುದು ತೀರಾ ಅಗತ್ಯವಿದೆ. ಕಳೆದ 20–30 ವರ್ಷಗಳಿಂದ ಈ ಭಾಗದಲ್ಲಿ ಏನು ಸಮಸ್ಯೆಯಿತ್ತು ಇದನ್ನು ಬಗೆಹರಿಸುವ ನಿಟ್ಟಿನಲ್ಲಿ ನಾನು ಮುಂದಿನ ದಿನಗಳಲ್ಲಿ ಬಾಗಲಕೋಟ ಜಿಲ್ಲೆಗೆ ಅಥವಾ ಇವರು ಹೇಳಿದಂತೆ ಜಮಖಂಡಿಯ ಭಾಗಕ್ಕೂ ಕೂಡ ಈ ಸ್ಟೇಷನ್ ಕೊಡುವುದಕ್ಕೆ ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು: ಆಯಿತು. ವಿಶ್ವನಾಥ್ ಎಸ್.ಆರ್. ಅವರು ಇಲ್ಲ. ಯು.ಟಿ. ಖಾದರ್‌ರವರು ತಾವು ಕೇಳಿ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ಬಸ್ಸು ಸಂಚಾರ ಹೆಚ್ಚಿಸುವುದು

54 (615) ಶ್ರೀ ಯು.ಟಿ. ಖಾದರ್ (ಮಂಗಳೂರು): ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ರೈತರು, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಗ್ರಾಮೀಣ ಮಟ್ಟದಲ್ಲಿ ಸರ್ಕಾರಿ ಬಸ್‌ಗಳ ಸಂಚಾರ ಇಲ್ಲದೇ ಇರುವುದರಿಂದ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಗ್ರಾಮೀಣ ಮಟ್ಟದ ಸಾರಿಗೆ ಸಂಚಾರವನ್ನು ಹೆಚ್ಚು ಮಾಡಲು ಯಾವ ಕ್ರಮ ಕೈಗೊಳ್ಳಲಾಗುವುದು ? (ವಿವರ ನೀಡುವುದು)

ಶ್ರೀ ಆರ್. ಅಶೋಕ (ಗೃಹ ಮತ್ತು ಸಾರಿಗೆ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಹುತೇಕ ಮಾರ್ಗಗಳು ರಾಷ್ಟ್ರೀಕೃತವಾಗದ ವಲಯದಲ್ಲಿದ್ದು 2001ರ ಜನಗಣತಿಯ ಪ್ರಕಾರ ಒಟ್ಟು 354 ಗ್ರಾಮಗಳು ಇದ್ದು, ಇವುಗಳ ಪೈಕಿ 150 ಗ್ರಾಮಗಳು ರಾಷ್ಟ್ರೀಕೃತವಾದ ವಲಯದಲ್ಲಿದ್ದು ಈ ಎಲ್ಲಾ ಗ್ರಾಮಗಳಿಗೆ ನಿಗಮದ ವತಿಯಿಂದ ಪ್ರಸ್ತುತ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿದೆ. ಇನ್ನುಳಿದ 204 ಗ್ರಾಮಗಳು ರಾಷ್ಟ್ರೀಕೃತವಾಗದ ವಲಯದಲ್ಲಿದ್ದು, ಇವುಗಳ ಪೈಕಿ 112 ಗ್ರಾಮಗಳಿಗೆ ನಿಗಮದ ವತಿಯಿಂದ ಸಾರಿಗೆ ಸೌಲಭ್ಯವನ್ನು ಪ್ರಸ್ತುತ ಕಲ್ಪಿಸಲಾಗಿದೆ. ರಾಷ್ಟ್ರೀಕೃತವಾಗದ ವಲಯದಲ್ಲಿ ಖಾಸಗಿ ಸಾರಿಗೆಗಳ ಪ್ರವರ್ತಕರು ಸಾರ್ವಜನಿಕ ಪ್ರಯಾಣಿಕರಿಗೆ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿದ್ದಾರೆ. ಈ ವಲಯದಲ್ಲಿ 23 ಮಾರ್ಗಗಳಲ್ಲಿ ಸಾರಿಗೆಗಳನ್ನು ಪ್ರಾರಂಭಿಸಲು ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ಇದರ ಮುಂದೆ ಅರ್ಜಿ ಸಲ್ಲಿಸಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಪರವಾನಗಿ ನೀಡಿದ ನಂತರ ಗ್ರಾಮೀಣ ಮಟ್ಟದಲ್ಲಿ ಸಾರಿಗೆ ಸೌಲಭ್ಯವನ್ನು ಒದಗಿಸಲಾಗುವುದು.

ಅನುಬಂಧ

ಪರವಾನಿಗೆ ಮಂಜೂರು ಮಾಡಿಕೊಡುವಂತೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ಇವರಲ್ಲಿ ಸಲ್ಲಿಸಿರುವ ಅರ್ಜಿ / ಮಾರ್ಗಗಳ ವಿವರಗಳು

ಕ್ರಮ ಸಂಖ್ಯೆ	ಮಾರ್ಗ	ಮಯಾ	ಆಚರಣೆಗೊಳಿಸಲು ಉದ್ದೇಶಿಸಿರುವ ಒಟ್ಟು ಬಸ್ಸುಗಳು
	ಎಲ್ಲಿಂದ – ಎಲ್ಲಿಗೆ		
1	2	3	4
1.	ಮಂಗಳೂರು–ಉಡುಪಿ	ಸುರತ್ಕಲ್, ಮೂಲ್ಕಿ	06

1	2	3	4
2	ತಲಪಾಡಿ–ಸುರತ್ಕಲ್	ತೊಕ್ಕೊಟ್ಟು, ಪಂಪ್‌ವೆಲ್, ಜ್ಯೋತಿ, ಲೇಡಿಹಿಲ್	22
3	ಕುಂಜತ್ತಬೈಲು–ಮಂಗಳಾದೇವಿ	ಕೂಳೂರು, ಲೇಡಿಹಿಲ್, ಜ್ಯೋತಿ	09
4	ಮಂಗಳಾದೇವಿ–ಬೊಂದೆಲ್	ಕಂಕನಾಡಿ, ಜ್ಯೋತಿ, ಲೇಡಿಹಿಲ್, ಕೂಳೂರು, ಕಾವೂರು	06
5	ಸ್ಟೇಟ್‌ಬ್ಯಾಂಕ್–ತಣ್ಣೀರುಬಾವಿ	ಪಿವಿಎಸ್, ಲೇಡಿಹಿಲ್	01
6	ಸ್ಟೇಟ್‌ಬ್ಯಾಂಕ್–ಚೇಳ್ಯಾರು ಎಂಆರ್‌ಪಿಎಲ್ ಕಾಲೋನಿ	ಪಿವಿಎಸ್, ಲೇಡಿಹಿಲ್, ಸುರತ್ಕಲ್, ಮುಕ್ಕಾ ಚೆಕ್‌ಪೋಸ್ಟ್	01
7	ಮಂಗಳೂರು–ಸ್ಟೇಟ್‌ಬ್ಯಾಂಕ್–ಉಡುಪಿ	ಪಿವಿಎಸ್, ಸುರತ್ಕಲ್, ಮೂಲ್ಕಿ	06
8	ಬಿ.ಸಿ. ರೋಡು–ಕಟೀಲು	ಬಂಟ್ವಾಳ, ಗಂಜಿಮಠ, ಕೈಕಂಬ,	01
9	ಬಿ.ಸಿ. ರೋಡು–ಸ್ಟೇಟ್‌ಬ್ಯಾಂಕ್–ಮಂಗಳೂರು	ಬಂಟ್ವಾಳ, ಗಂಜಿಮಠ, ಕೈಕಂಬ, ಗುರುಪುರ	01

1	2	3	4
10	ಮಂಗಳೂರು (ಸ್ಟೇಟ್‌ಬ್ಯಾಂಕ್)–ಕಾರ್ಕಳ	ಮೂಡಬಿದ್ರಿ	08
11	ಮಂಗಳೂರು (ಎ.ಬಿ. ಶೆಟ್ಟಿ ವೃತ್ತ)–ಅಂಬಲಮೊಗರು	ತೊಕ್ಕೊಟ್ಟು	02
12	(ಅ) ಮಂಗಳೂರು (ಸ್ಟೇಟ್‌ಬ್ಯಾಂಕ್)–ಮುಡಿಪು	ತೊಕ್ಕಟ್ಟು, ಮೆಲ್ಕಾರು	02
13	ಮಂಗಳೂರು (ಸ್ಟೇಟ್‌ಬ್ಯಾಂಕ್) ಬಿ.ಸಿ. ರೋಡು	ತೊಕ್ಕೊಟ್ಟು, ಮುಡಿಪು, ಮೆಲ್ಕಾರ್	04
14	ಮಂಗಳೂರು– ಸ್ಟೇಟ್‌ಬ್ಯಾಂಕ್– ಬಿ.ಸಿ. ರೋಡು	ತೊಕ್ಕೊಟ್ಟು, ಮುಡಿಪು, ಇರಾ, ಮೊಂತಿಮಾರ್, ಮಂಚಿ, ಕುಕ್ಕಾಜೆ, ಮಾರ್ನಬೈಲ್, ಮೆಲ್ಕಾರ್	03
15	ಉಪ್ಪನಂಗಡಿ–ನೆಲ್ಲಿಪಲ್ಕೆ–ಬಾಜಾರು	ಪರಿಯೊಟ್ಟು, ಸರಳಿಕಟ್ಟೆ, ತೆಕ್ಕಾರು	02
16	(ಅ) ಬಿ.ಸಿ. ರೋಡು–ಕಾರ್ಕಳ ಮತ್ತು ಹಿಂದಕ್ಕೆ (ಆ) ಕಾರ್ಕಳ–ಬಿ.ಸಿ. ರೋಡು ಮತ್ತು ಹಿಂದಕ್ಕೆ	ಬಂಟ್ವಾಳ, ಸಿದ್ದಕಟ್ಟೆ, ಮೂಡಬಿದ್ರಿ ಮೂಡಬಿದ್ರಿ, ಮಂಗಳೂರು, ತೊಕ್ಕೊಟ್ಟು, ಮೆಲ್ಕಾರ್	12

1	2	3	4
17	(ಅ) ಬಿ.ಸಿ. ರೋಡು– ಕಾರ್ಕಳ ಮತ್ತು ಹಿಂದಕ್ಕೆ (ಆ) ಕಾರ್ಕಳ–ಬಿ.ಸಿ. ರೋಡು ಮತ್ತು ಹಿಂದಕ್ಕೆ (ಇ) ಮಂಗಳೂರು–ಬಿ.ಸಿ. ರೋಡು ಮತ್ತು ಹಿಂದಕ್ಕೆ	ಮೂಡಬಿದ್ರಿ, ಮಂಗಳೂರು, ತೊಕ್ಕೊಟ್ಟು, ಮೆಲ್ಕಾರ್ ಬಂಟ್ವಾಳ, ಸಿದ್ದಕಟ್ಟೆ ಮೂಡಬಿದ್ರಿ, ತೊಕ್ಕೊಟ್ಟು, ಮೆಲ್ಕಾರ್	20
18	(ಅ) ಮಂಗಳೂರು–ಕಾರ್ಕಳ ಮತ್ತು ಹಿಂದಕ್ಕೆ (ಆ) ಕಾರ್ಕಳ–ಬಿ.ಸಿ. ರೋಡು ಮತ್ತು ಹಿಂದಕ್ಕೆ (ಇ) ಬಿ.ಸಿ. ರೋಡು– ಕಾರ್ಕಳ ಮತ್ತು ಹಿಂದಕ್ಕೆ	ಮೂಡಬಿದ್ರಿ ಮೂಡಬಿದ್ರಿ, ಬಂಟ್ವಾಳ ಮೆಲ್ಕಾರ್, ತೊಕ್ಕೊಟ್ಟು, ಮಂಗಳೂರು, ಮೂಡಬಿದ್ರಿ	02
19	ಮಂಗಳೂರು–ಕಾರ್ಕಳ ಮತ್ತು ಹಿಂದಕ್ಕೆ	ಮೂಲ್ಕಿ, ಪಡಿಬಿದ್ರೆ, ನಿಟ್ಟೆ	08
20	(ಅ) ಬಿ.ಸಿ. ರೋಡು– ಕಟೀಲು ಮತ್ತು ಹಿಂದಕ್ಕೆ (ಆ) ಕಟೀಲು–ಸುಬ್ರಹ್ಮಣ್ಯ ಮತ್ತು ಹಿಂದಕ್ಕೆ	ಮೂಡಬಿದ್ರಿ, ವಾಮಪದವು, ಮಡಂತ್ಯಾರು, ಉಪ್ಪಿನಂಗಡಿ, ಕಡಬ	02
21	(ಅ) ಬಿ.ಸಿ. ರೋಡು–ಕೈಕಂಬ ಮತ್ತು ಹಿಂದಕ್ಕೆ (ಆ) ಕೈಕಂಬ–ಬಿ.ಸಿ. ರೋಡು ಮತ್ತು ಹಿಂದಕ್ಕೆ	ಪೊಳಲಿ ಪೊಳಲಿ, ಎರ್ಮಾಳ್, ಸೊರ್ನಾಡ್	

1	2	3	4
22	(ಅ) ಪುತ್ತೂರು–ಧರ್ಬೆತ್ತಡ್ಕೆ ಮತ್ತು ಹಿಂದಕ್ಕೆ (ಆ) ಪುತ್ತೂರು–ಧೂಮಡ್ಡ ಮತ್ತು ಹಿಂದಕ್ಕೆ	ಸಂಟ್ಯಾರ್, ಉಪ್ಪಳಿಗೆ, ಅಜಲಡ್ಕ ಸಂಟ್ಯಾರ್, ಉಪ್ಪಳಿಗೆ, ಇರ್ದೆ	01
23	ಮಂಗಳೂರು/ಸ್ಟೇಟ್‌ಬ್ಯಾಂಕ್–ಪೊಳಲಿ ಮತ್ತು ಹಿಂದಕ್ಕೆ	ಪರಂಗಿಪೇಟೆ, ಕಡೆಗೋಳಿ, ಬೆಂನದೆಪವು, ಕಲ್ಪನೆ	01

ಶೀ ಯು.ಟಿ.ಖಾದರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ, ಆದರೆ ಅಲ್ಲಿ ಯಾವುದೂ ಕಾರ್ಯಗತಗೊಳಿಸಲಿಕ್ಕೆ ಆಗುತ್ತಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಬಸ್ ಸಾರಿಗೆ ವ್ಯವಸ್ಥೆಯಿದೆಯೊ, ಹತ್ತು–ಹದಿನೈದು ವರ್ಷಗಳಿಂದ ಇದಕ್ಕೆ ಏನು ಪರ್ಮಿಟ್ ಕೊಟ್ಟಿದ್ದಾರೆ, ಅದೇ ಪರ್ಮಿಟ್‌ನಲ್ಲಿ ನಡೆಯುತ್ತಿದೆ. ಗ್ರಾಮೀಣ ಪ್ರದೇಶಗಳಿಂದ ಬರುವಂಥ ವಿದ್ಯಾರ್ಥಿಗಳು, ಕಾರ್ಮಿಕರು ಬಸ್‌ನ ಟಾಪ್ ಮೇಲೆ ಕುಳಿತು ಪ್ರಯಾಣ ಮಾಡುವಂಥ ಪರಿಸ್ಥಿತಿಯಿದೆ. ನನ್ನ ಕ್ಷೇತ್ರದ ಅಂಬಲಮೊಗರು ಅರೆಕರ್, ಪೌರ್, ಇರಾ ಗ್ರಾಮ, ಮಂಚಿ, ನಲಿಂಗಾಣ ಮುಂತಾದ ಗ್ರಾಮಗಳಲ್ಲಿ ಬಹಳಷ್ಟು ಸಮಸ್ಯೆಗಳಿವೆ. ನಾನು ಕಳೆದ ಸಲ ಈ ಪ್ರಶ್ನೆ ಕೇಳಿದಾಗ ತಾವು ಹೇಳಿದ ನಂತರ ಟೆಂಪರರಿಯಾಗಿ ಆರು ತಿಂಗಳುಗಳ ಕಾಲ ಬಸ್‌ಗಳನ್ನು ಓಡಿಸಿದರು. ಅನಂತರ ಬೇರೆ ಬೇರೆ ಕಾರಣಗಳಿಂದಾಗಿ ನಿಲ್ಲಿಸಿದ್ದಾರೆ. ನಮಗೆ ಅಲ್ಲಿ ಏನು ಹೇಳುತ್ತಾರೆ ಎಂದರೆ, ಸ್ಟೇಟ್ ಬ್ಯಾಂಕ್‌ಗೆ ಎಂದು ಪರ್ಮಿಟ್ ಬರೆದಿದ್ದಾರೆ. ಅಲ್ಲಿ ಪರ್ಮಿಟ್ ಕೊಟ್ಟಾಗ ಅಲ್ಲಿನ ಮ್ಯಾಜಿಸ್ಟ್ರೇಟ್ ನೋಟಿಫಿಕೇಷನ್ ಇದೆ.

ಅಧ್ಯಕ್ಷರು: ಅವರು ಕೊಟ್ಟಿರುವ ಉತ್ತರದಲ್ಲಿ ನಿಮಗೇನು ಬೇಕೋ ಕ್ಲಾರಿಫಿಕೇಷನ್ ಕೇಳಿ.

ಶೀ ಯು.ಟಿ. ಖಾದರ್: ಅಲ್ಲಿ ಬಹಳಷ್ಟು ಸಮಸ್ಯೆಗಳಿವೆ. ಮ್ಯಾಜಿಸ್ಟ್ರೇಟ್ ನೋಟಿಫಿಕೇಷನ್ ಬಗ್ಗೆ ಸ್ಪಷ್ಟವಾದ ತೀರ್ಮಾನವಾಗಬೇಕು. ಜೊತೆಗೆ ಬಸ್‌ಗಳನ್ನು

ಹಾಕಲೇ ಬೇಕೆಂದು ನೇರವಾಗಿ ಸಂಬಂಧಪಟ್ಟವರಿಗೆ ತಾವು ನಿರ್ದೇಶನ ಕೊಡಬೇಕು.

ಶ್ರೀ ಆರ್.ಅಶೋಕ್ : ಮಾನ್ಯ ಅಧ್ಯಕ್ಷರೆ, ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಂತೆ ಬಹಳ ವರ್ಷಗಳ ಕಾಲದಿಂದ ಖಾಸಗಿ ಬಸ್‌ಗಳು ನಿರಂತರವಾಗಿ ನಡೆಯುತ್ತಿವೆ. ನಮ್ಮ ನೋಟಿಫೈಡ್ ಆಗಿರುವ ರಾಷ್ಟ್ರೀಕೃತ ಮಾರ್ಗಗಳೇನಿವೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2001 ರ ಜನಗಣತಿ ಪ್ರಕಾರ ಒಟ್ಟು 354 ಗ್ರಾಮಗಳಿವೆ. ಇದರಲ್ಲಿ 150 ಗ್ರಾಮಗಳು ಮಾತ್ರ ರಾಷ್ಟ್ರೀಕೃತವಾಗಿದ್ದು ಉಳಿದಂತಹ 204 ಗ್ರಾಮಗಳು ರಾಷ್ಟ್ರೀಕೃತ ವಲಯದಲ್ಲಿ ಇಲ್ಲ, ಅಂದರೆ ಖಾಸಗಿ ವಲಯದಲ್ಲಿವೆ. ರಾಷ್ಟ್ರೀಕೃತ ವಲಯದಲ್ಲಿರುವ 150 ಗ್ರಾಮಗಳಿಗೆಲ್ಲಾ ಕಡೆ ನಮ್ಮ ಬಸ್‌ಗಳಿವೆ. ರಾಷ್ಟ್ರೀಕೃತ ವಲಯದಲ್ಲಿ ಇಲ್ಲದಿರುವ 204 ಗ್ರಾಮಗಳಲ್ಲಿ ನಮ್ಮ ಬಸ್‌ಗಳ ಓಡಾಟ ಹೆಚ್ಚಿಗೆ ಇಲ್ಲ. ತಮಗೆ ಗೊತ್ತಿರುವ ಹಾಗೆ ಕಳೆದ ಬಾರಿ ನಾನು ಮಂಗಳೂರು–ಮಣಿಪಾಲ ಮಾರ್ಗವಾಗಿ ಬಸ್ ಹಾಕಬೇಕಾದರೆ ಬಹಳ ಗಲಾಟೆಯಿತ್ತು. ಒಂದು ವರ್ಷದಿಂದ ಅವರ ಜೊತೆಗೆ ಹೋರಾಟ ಮಾಡಿ ಕೋರ್ಟುಗಳಿಗೆ ಅಲೆದು ಹೈಕೋರ್ಟು ಮೆಟ್ಟಿಲೇರಿ ಕೊನೆಗೆ ಮಂಗಳೂರು–ಮಣಿಪಾಲ ಬಸ್ ಹಾಕುವುದಕ್ಕೆ ಸಾಧ್ಯವಾಯಿತು. ಇಲ್ಲಿ ಬಹಳ ದೊಡ್ಡದಾದಂಥ ಒಂದು ಪ್ರೈವೇಟ್ ಲಾಬಿ ಇದೆ. ಬ್ಯಾಂಕ್ ಸರ್ಕಲ್‌ಗೆ ನಮ್ಮ ಸರ್ಕಾರಿ ಬಸ್‌ಗಳು ಹೋಗುವುದಕ್ಕೇ ಬಿಡುವುದಿಲ್ಲ. ನಮ್ಮ ನೀತಿ ನಿಯಮಗಳ ಪ್ರಕಾರ ಜಿಲ್ಲಾಧಿಕಾರಿಗಳ RTA ಮುಖಾಂತರವೇ ರೂಟ್‌ಗಳಿಗೆ ಬಸ್‌ಗಳನ್ನು ಕೊಡಬೇಕು. ಬಹಳ ವರ್ಷಗಳ ಹಿಂದೆಯೇ ಆ ರೂಟ್‌ಗಳನ್ನು ಇವರು ತೆಗೆದುಕೊಂಡು ಬಿಟ್ಟಿದ್ದಾರೆ. ಪ್ರೈವೇಟ್‌ನವರು ಆ ರೂಟ್‌ಗಳನ್ನು ತೆಗೆದುಕೊಂಡಿರುವುದರಿಂದ ನಮ್ಮ ಬಸ್ ಅಲ್ಲಿ ಹಾಕಬೇಕಾದರೆ RTAನಲ್ಲಿ ಪರ್ಮಿಷನ್ ಸಿಗುವುದಿಲ್ಲ. ನಾವು ಈಗಲೂ ಸಹ 23 ಹೊಸ ಮಾರ್ಗಗಳಿಗೆ RTA ನಲ್ಲಿ ಅಪ್ಲೈ ಮಾಡಿದ್ದೇವೆ. ಕಳೆದ ಒಂದು ವರ್ಷಕ್ಕಿಂತಲೂ ಮೇಲ್ಪಟ್ಟು ಅಲ್ಲಿ ಸರ್ಕಾರಿ ಬಸ್‌ಗಳನ್ನು ಓಡಿಸುವುದಕ್ಕೆ ಅವಕಾಶ ಕೊಟ್ಟಿಲ್ಲ. ಆ ರೂಟ್‌ನ್ನು ಪ್ರೈವೇಟ್‌ನವರು ರಿಜಿಸ್ಟರ್ ಮಾಡಿ ಬಿಟ್ಟಿದ್ದಾರೆ. ನಾನು ಈಗಲೂ ಅಲ್ಲಿನ ಜಿಲ್ಲಾಧಿಕಾರಿಯವರ ಜೊತೆ ಮಾತನಾಡುತ್ತೇನೆ. ನಾವೇನು ರೂಟುಗಳಿಗೆ ಅನುಮತಿ ಕೇಳಿದ್ದೇವೆ ಅಷ್ಟು ರೂಟ್‌ಗಳಿಗೆ ಅನುಮತಿ ಕೊಡಬೇಕು. ನಿಮಗೂ ಮಾಹಿತಿ ಒದಗಿಸಿದ್ದೇನೆಂದು ಅನ್ನಿಸುತ್ತದೆ. ಸುಮಾರು 23 ರೂಟ್ಸ್‌ಗೆ ಎಷ್ಟೆಷ್ಟು ಬಸ್‌ಗಳಿಗೆ ಪರ್ಮಿಟ್ ಬೇಕೆಂದು ಕೇಳಿದ್ದೇನೆ. ತಾವು ಜಿಲ್ಲಾಧಿಕಾರಿಗಳಿಂದ ಪ್ರಯತ್ನಿಸಿ ನಾನು ಕೂಡ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಮಾತನಾಡುತ್ತೇನೆ.

ಒಟ್ಟಿನಲ್ಲಿ ಮಂಗಳೂರಿನಲ್ಲಿ ನಾವು ಈ ತರಹ ಹೊಸದಾಗಿ ಪ್ರಾರಂಭ ಮಾಡಿದ್ದೇವೆ. ಸರ್ಕಾರಿ ಬಸ್ ಓಡಾಡುವಂಥದ್ದು ಇನ್ನೂ ಜೋರಾಗಿ ಆಗಬೇಕು. ಭಟ್ಕಳ ಸೇರಿದಂತೆ ಬೇರೆ ಬೇರೆ ಕಡೆ ಬಸ್‌ಗಳು ಓಡಾಡಲಿಕ್ಕೆ ಮೊದಲ ಬಾರಿಗೆ ಅವಕಾಶ ಮಾಡಿದ್ದೆವೆ. ಈ ಹಿಂದೆ ಮಾಡುವುದಕ್ಕೆ ಅವಕಾಶ ಕೊಟ್ಟಿರಲಿಲ್ಲ. ಅದ್ದರಿಂದ, ಇದನ್ನು ಮುಂದುವರಿಸುತ್ತೇವೆ. ರಾಷ್ಟ್ರೀಕೃತವಲ್ಲದಂಥ ಮಾರ್ಗಗಳಲ್ಲೂ ಸಹ ಸಾರಿಗೆ ವ್ಯವಸ್ಥೆಯನ್ನು ಅಭಿವೃದ್ಧಿ ಮಾಡುವ ದೃಷ್ಟಿಯಿಂದ ನಮ್ಮ ಸರ್ಕಾರ ಧೃಡವಾದಂಥ ಕ್ರಮಗಳನ್ನು ತೆಗೆದುಕೊಳ್ಳುತ್ತದೆ, ಎಲ್ಲಾ ಹಳ್ಳಿಗಳಿಗೂ ನಮ್ಮ ಬಸ್ ಹೋಗಬೇಕೆನ್ನುವುದು ನಮ್ಮ ಉದ್ದೇಶವಿದೆ, ಅದನ್ನು ನಾವು ಸಫಲಗೊಳಿಸುತ್ತೇವೆ.

ಶ್ರೀ ಯು.ಟಿ. ಖಾದರ್: ತಾವು ಪರ್ಮಿಟ್‌ಗಾಗಿ ಕೊಟ್ಟಿರುವ ಪಟ್ಟಿ ಇಂಪ್ಲಿಮೆಂಟ್ ಆಗಲಿ. ಎರಡನೇ ಸಮಸ್ಯೆ ಏನೆಂದರೆ, ಪ್ರೈವೇಟ್ ರೂಟ್‌ಗೆ ಪರ್ಮಿಟ್ ಮಾಡಿಟ್ಟುಕೊಂಡಿದ್ದಾರೆ ಈಗ ಅಲ್ಲಿಗೆ ಬಸ್‌ನ್ನು ಹಾಕುತ್ತಿಲ್ಲ. ಯಾರೂ ಈ ರೀತಿಯಾಗಿ ಪರ್ಮಿಟ್ ಮಾಡಿಟ್ಟುಕೊಂಡು ಒಂದು ವರ್ಷ ಮೂರು ತಿಂಗಳಲ್ಲಿ ಬಸ್ ಹಾಕದಿದ್ದರೆ ಅಂಥ ಪರ್ಮಿಟ್‌ನ್ನು ರದ್ದುಪಡಿಸಲು RTAನವರಿಗೆ ಅಧಿಕಾರವಿದೆ ಇಲ್ಲದಿದ್ದರೆ ಹೊಸಬರಿಗೆ ಅವಕಾಶ ಮಾಡಿ ಕೊಡಬೇಕು. ಈ ಕೆಲಸವೂ ಕೂಡ ಈಗ ಆಗುತ್ತಿಲ್ಲ. ಈ ಸಮಸ್ಯೆ ನೋಡುವಾಗ ನನಗೆ ಏನು ಅನ್ನಿಸುತ್ತದೆ ಎಂದರೆ, ಯಾರು ಪರ್ಮಿಟ್ ಮಾಡಿಟ್ಟುಕೊಂಡಿದ್ದಾರೆ ಅವರೆಲ್ಲಾ ಆ ರೂಟ್‌ಗಳಿಗೆ ಬಸ್‌ಗಳನ್ನು ಹಾಕಿದರೆ ಬಹುಶ: ಈ ಸಮಸ್ಯೆ ಬರಲಿಕ್ಕಿಲ್ಲ. ಪ್ರೈವೇಟ್‌ನವರಿಗೆ ಯಾರ್ಯಾರಿಗೆ ಎಷ್ಟೆಷ್ಟು ಪರ್ಮಿಟ್ ಸ್ಯಾಂಕ್ಷನ್ ಆಗಿದೆ, ಅದರಲ್ಲಿ ಎಷ್ಟು ಜನ ಆ ರೂಟ್‌ಗಳಿಗೆ ಬಸ್‌ಗಳನ್ನು ಹಾಕಿದ್ದಾರೆ ಎಷ್ಟು ಜನ ಬಸ್‌ಗಳನ್ನು ಹಾಕಿಲ್ಲ, ಬಸ್‌ಗಳನ್ನು ಹಾಕಿಲ್ಲದಂಥವರಿಗೆ ಟೈಮ್ ಲಿಮಿಟ್‌ನಲ್ಲಿ ಬಸ್‌ಗಳನ್ನು ಹಾಕಲೇಬೇಕೆಂದು ಸ್ಪಷ್ಟವಾದ ನಿರ್ದೇಶನ ಕೊಡಬೇಕು ಇಲ್ಲವಾದರೆ ಪರ್ಮಿಟ್ ರದ್ದುಪಡಿಸುತ್ತೇವೆಂದು ತಾವು RTA ನವರಿಗೆ ಹೇಳಿದರೆ ಖಂಡಿತವಾಗಿಯೂ ಕೆಲಸವಾಗುತ್ತದೆ.

ಅಧ್ಯಕ್ಷರು: Please, ಅವರು ಉತ್ತರ ಹೇಳಲಿ ನೀವು ಮತ್ತೆ ಮತ್ತೆ ಅದನ್ನೇ ರಿಪೀಟ್ ಮಾಡಬೇಡಿ.

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೆ, ಪ್ರೈವೇಟ್ ಬಸ್ ಮಾಲೀಕರು RTAನಲ್ಲಿ ಅಪ್ಲೈ ಮಾಡಿ ರೂಟ್‌ಗೆ ಪರ್ಮಿಟ್ ತೆಗೆದುಕೊಂಡು ಬಸ್‌ಗಳನ್ನು ಓಡಿಸದಿರತಕ್ಕಂಥದ್ದು ನನ್ನ ಗಮನಕ್ಕೆ ತಂದಿದ್ದಾರೆ. ಕಾನೂನು ರೀತಿಯಲ್ಲಿ ಅವರು ಪರ್ಮಿಟ್ ತೆಗೆದುಕೊಂಡ ಮೇಲೆ ಬಸ್‌ಗಳನ್ನು ಓಡಿಸಬೇಕಾಗುತ್ತದೆ.

ಆದ್ದರಿಂದ, ಅವರು ಬಸ್ ಓಡಿಸದೆ ಇದ್ದರೆ ಪರ್ಮಿಟ್ ಕ್ಯಾನ್ಸಲ್ ಮಾಡುವುದಕ್ಕೆ ಮತ್ತು ಸರ್ಕಾರಿ ಸಂಸ್ಥೆಯ ಮೂಲಕ ನಾವು ಏನು ರೂಟ್ಸ್‌ನ್ನು ಅಪ್ಲೈ ಮಾಡಿದ್ದೇವೆ ಅದು ಸಿಗುವಂಥದ್ದಕ್ಕೆ ನಾನು ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಸಾಕು ಬಿಡಿ ತಾವು ಸಾಕಷ್ಟು ಕೇಳಿದ್ದೀರಿ. ಈಶ್ವರ್ ಭೀಮಣ್ಣ ಖಂಡ್ರೆಯವರು ತಾವು ಪ್ರಶ್ನೆ ಕೇಳಿ.

ಭಾಲ್ಕಿ ಕ್ಷೇತ್ರದಲ್ಲಿ ತೀವ್ರವಾದ ವಿದ್ಯುತ್ ಸಮಸ್ಯೆ

55 (272) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ಮತಕ್ಷೇತ್ರದಲ್ಲಿ ತೀವ್ರವಾದ ವಿದ್ಯುತ್ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಈ ಕ್ಷೇತ್ರದಲ್ಲಿ ವಿದ್ಯುತ್ ಸಮಸ್ಯೆಯನ್ನು ಪರಿಹರಿಸಲು ಸರ್ಕಾರದ ಮುಂದಿರುವ ಕ್ರಮಗಳೇನು ;

ಇ) ಈ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿದ್ಯುತ್ ಪರಿವರ್ತಕಗಳ (ಟ್ರಾನ್ಸ್‌ಫಾರ್ಮರ್‌ಗಳು) ಸಂಖ್ಯೆ ಎಷ್ಟು ; ಈ ಪೈಕಿ ಎಷ್ಟು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ ಮತ್ತು ಎಷ್ಟು ದುರಸ್ತಿಯಲ್ಲಿವೆ ; (ಗ್ರಾಮವಾರು ಅಂಕಿ ಅಂಶಗಳನ್ನು ಒದಗಿಸುವುದು)

ಈ) ಈ ಕ್ಷೇತ್ರದಲ್ಲಿ ಹಲವಾರು ಟಿ.ಸಿ.ಗಳು ದುರಸ್ತಿಯಲ್ಲಿದ್ದು, ಇವುಗಳನ್ನು ಬದಲಾಯಿಸಲು ಸರ್ಕಾರದ ಮುಂದಿರುವ ಕ್ರಮಗಳೇನು ;

ಉ) ಈ ಕ್ಷೇತ್ರಕ್ಕೆ ದಿನಪೂರ್ತಿ ವೋಲ್ಟೇಜ್ ಏರಿಳಿತವಿಲ್ಲದ ಉತ್ತಮ ಗುಣಮಟ್ಟದ ವಿದ್ಯುತ್ತನ್ನು ಪೂರೈಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಕು॥ ಶೋಭಾ ಕರಂದ್ಲಾಜೆ (ಇಂಧನ ಸಚಿವರು):

ಅ) ಭಾಲ್ಕಿ ಮತಕ್ಷೇತ್ರದಲ್ಲಿ ಕಳೆದ ಜನವರಿ 2010ರ ವರ್ಷದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ 6 ಗಂಟೆಗಳ ಕಾಲ 3 ಫೇಸ್ ಮತ್ತು 6 ಗಂಟೆಗಳ ಕಾಲ ಸಿಂಗಲ್ ಫೇಸ್ ವಿದ್ಯುತ್‌ನ್ನು ಬ್ಯಾಚ್‌ಗಳಲ್ಲಿ ನೀಡಲಾಗುತ್ತಿತ್ತು. ಪ್ರಸ್ತುತ ಜನವರಿ 2011ರಲ್ಲಿ ಭಾಲ್ಕಿ ಮತಕ್ಷೇತ್ರಕ್ಕೆ ಸಂಜೆ 6 ಗಂಟೆಯಿಂದ ಮುಂಜಾನೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜು ಮಾಡುವುದೂ ಸೇರಿದಂತೆ 12 ಗಂಟೆಗಳ ಕಾಲ ಸಿಂಗಲ್ ಫೇಸ್ ಹಾಗೂ 6 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ನೀಡಲಾಗುತ್ತಿದೆ. ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಭಾಲ್ಕಿ ಮತಕ್ಷೇತ್ರಕ್ಕೆ ಈ ವರ್ಷ ಹೆಚ್ಚಿನ ಅವಧಿಗೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.